**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 8281 /2024**

**ಚಾಸಾ ಃ- 06 / ಪ್ರಾಸಾ ಃ- 03**

| | |
|---|---|
| ಹೆಸರು | ನಾರಾಯಣ ಎಂ |
| ತಂದೆ ಹೆಸರು | ಮರಿಯಪ್ಪ |
| ವಯಸ್ಸು | 50 |
| ಉದ್ಯೋಗ | ಅಬಕಾರಿ ಇನ್ಸ್ ಪೆಕ್ಟರ್ , ಮೂಡಿಗೆರೆ ವಲಯ , ಚಿಕ್ಕಮಂಗಳೂರು |
| ವಿಳಾಸ | ಬೆಂಗಳೂರು |

**ದಿನಾಂಕಃ 13.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಪೆಬ್ರವರಿ 2022 ರಿಂದ ಸೆಪ್ಟೆಂಬರ್ 2026ರವರೆಗೆ ಮಾಗಡಿ ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕರೆಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 27.11.2023 ರಂದು ನಾನು ಮತ್ತು ನನ್ನ ಸಿಬ್ಬಂದಿಗಳಾದ ಚಾಸಾ3 ರವರಾದ ಚೇತನ್ ಹಾಗೂ ಚಾಸಾ 4 ರವರಾದ ಹನುಮಂತ ಜಾಲಿಕಟ್ಟಿ ರವರ ಜೊತೆ ಗಸ್ತು ಮಾಡುತ್ತಿರುವಾಗ ಸಂಜೆ 4.00ಗಂಟೆ ಸಮಯದಲ್ಲಿ ನಾವು ಹೊಸಪೇಟೆ ಸರ್ಕಲ್ ನಲ್ಲಿ ಇದ್ದಾಗ ನನಗೆ ಮಾಹಿತಿ ಬಂದಿದ್ದೇನೆಂದರೆ ಮಾಗಡಿ - ಬೆಂಗಳೂರು ರಸ್ತೆಯ ತಗಚಿಗುಪ್ಪೆ ಗ್ರಾಮದಲ್ಲಿ ನಂಜಯ್ಯ ಎಂಬುವವನು ತನ್ನ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ್ದು ಆಗ ನಾನು ಮತ್ತು ಚಾಸಾ 3 ಹಾಗೂ 4 ರವರು ಸಂಜೆ 4.10 ಗಂಟೆಗೆ ಸದರಿ ತಗಚಿಗುಪ್ಪೆ ಬಸ್ ನಿಲ್ದಾಣದ ಹತ್ತಿರ ಹೋಗಿರುತ್ತೇವೆ. ಹಾಗೂ ನಿಲ್ದಾಣದ ಹತ್ತಿರ ನಿಂತಿದ್ದ ಚಾಸಾ 1 ಮತ್ತು 2

ರವರಿಗೆ ಬಂದಂತಹ ಮಾಹಿತಿಯನ್ನು ಹೇಳಿ ಸದರಿ ಕಾರ್ಯಾಚಾರಣೆಗೆ ನಮಗೆ ಸಹಕರಿಸಬೇಕು ಎಂದು ಕೇಳಿಕೊಂಡು ಆಗ ಸದರಿ ಚಾಸಾ 1 ಮತ್ತು 2 ರವರು ಒಪ್ಪಿಕೊಂಡಿದ್ದು ಅವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ನಂತರ ಚಾಸಾ1 ಮತ್ತು 2 ರವರ ಜೊತೆ ಆರೋಪಿ ನಂಜಯ್ಯ ರವರ ಮನೆಯ ಮುಂದೆ ಇರುವ ಒಂದು ಪೆಟ್ಟಿಗೆ ಅಂಗಡಿ ಹತ್ತಿರ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿಯು ಕೂತಿದ್ದರು. ಆತನನ್ನು ಕೇಳಲಾಗಿ ಆತನು ನಾನೇ ನಂಜಯ್ಯ ಎಂದು ಹೇಳಿದನು. ನಂತರ ನಾವು ಬಂದ ವಿಷಯವನ್ನು ಆತನಿಗೆ ಹೇಳಿದಾಗ ಆತನು ಗಾಭರಿಗೊಂಡಿರುತ್ತಾನೆ ಹಾಗೂ ನನ್ನ ಬಳಿ ಯಾವುದೇ ಮದ್ಯ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ನಂತರ ನಾವು ಆತನಿಗೆ ಅಂಗಡಿಯನ್ನು ಶೋಧನೆ ಮಾಡಬೇಕು ನಿಮ್ಮ ಅಭ್ಯಂತರ ಇದೆಯೆ ಎಂದು ಕೇಳಲಾಗಿ ಅತನು ಇಲ್ಲ ಎಂದು ತಿಳಿಸಿರುತ್ತಾನೆ. ನ್ಯಾಯಾಲಯದಿಂದ ಶೋದನಾ ವರೆಂಟನ್ನು ಪಡೆಯಲು ಕಾಲಾವಕಾಶ ಇರದ ಕಾರಣ ಸ್ಥಳದಲ್ಲೆ ಶೋಧನಾ ಸಮುಚಿತ ವಾರೆಂಟನ್ನು ತಯಾರಿಸಿ ಆರೋಪಿರವರ ಸಹಿಯನ್ನು ಪಡೆದುಕೊಂಡಿರುತೇವೆ ಮತ್ತು ನಾನು ಸಹಿ ಮಾಡಿರುತ್ತೇನೆ. ನಂತರ ಅಂಗಡಿಯನುನ ಪರಿಶೀಲಿಸುವ ಮೊದಲು ನಮ್ಮ ಅಂಗಶೋಧನೆಯನ್ನು ಮಾಡಿಕೊಂಡಿರುತ್ತೇವೆ. ನಂತರ ಅಂಗಡಿಯನ್ನು ಪ್ರವೇಶಿಸಲಾಗಿ ಅಂಗಡಿಯಲ್ಲಿ ನಮಗೆ ಏನೂ ದೊರಕಿರುವುದಿಲ್ಲ ನಂತರ ಹಿಂಭಾಗದ ಮನೆಗೆ ಹೋಗಲಾಗಿ ಮನಯಲ್ಲಿ 2 ಬಾಗಿಲುಗಳು ಇದ್ದು ಒಂದು ಮನೆಗೆ ಹೋಗುವ ಬಾಗಿಲು ಹಾಗೂ ಇನ್ನೊಂದು ದನದ ಕೊಟ್ಟಿಗೆಗೆ ಹೋಗುವ ಬಾಗಿಲು ಇದ್ದು ದನದ ಕೊಟ್ಟಿಗೆಗೆ ನಾವು ಪ್ರವೇಶ ಮಾಡಲಾಗಿ ದನದ ಕೊಟ್ಟಿಗೆಯಲ್ಲಿ ನಮಗೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಬಿಯರ್ ಬಾಟೆಲಿಗಳು ಸಿಕ್ಕಿರುತ್ತವೆ. ನಂತರ ಮನೆಯ ಬಲಭಾಗದ ಒಂದು ಕೋಣೆಯಲ್ಲಿ singal Diwan cot ಇದ್ದು ಅದರ ಕೆಳಗಡೆ ಹಳದಿ ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಸುಮಾರು ಬ್ರಾಂಡುಗಳ ಮದ್ಯ ನಮಗೆ ಸಿಕ್ಕಿರುತ್ತವೆ.

ಸದರಿ ಮದ್ಯ ಹಾಗೂ ಬಿಯರ್ ಅನ್ನು ಇಟ್ಟುಕೊಳ್ಳಲು ನಿಮಗೆ ಏನಾದರೂ ಪರವಾನಗಿ ಇದೆಯೆ ಎಂದು ಆರೋಪಿಗೆ ಕೇಳಲಾಗಿ ಆರೋಪಿಯು ಯಾವುದೇ ಪರವಾಗಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಈ ಮಟ್ಟದಲ್ಲಿ ಮದ್ಯ ಮತ್ತು ಬಿಯರ್ ಅನ್ನು ಹೊಂದುವುದು ಅಬಕಾರಿ ಕಾಯ್ದೆ ಪ್ರಕಾರ ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ಸದರಿ ಮದ್ಯ ಮತ್ತು ಬಿಯರ್ ಅನ್ನು ಸ್ಥಳದಲ್ಲಿಯೇ ಜಪ್ತಿ ಪಡಿಸಿಕೊಂಡಿರುತ್ತೇವೆ. 180ಎಂ ಎಲ್ ನ 8 ಓಲ್ಡ್ ಅಡ್ಮಿರಲ್ ಬ್ರಾಂಡಿಯ ಟೆಟ್ರಾ ಪ್ಯಾಕಗಳು , 180 ಎಂ ಎಲ್ ನ 6 ಓಲ್ಡ್ ಮಾಂಕ್ ರಮ್ ನ ಟೆಟ್ರಾ ಪ್ಯಾಕುಗಳು, 180 ಎಂ ಎಲ್ ನ 9 ಓಟಿ ವಿಸ್ಕಿ ಯ ಟೆಟ್ರಾ ಪ್ಯಾಕುಗಳು, 180 ಎಂ ಎಲ್ ನ 12 ಎಂ ಸಿ ರಮ್ ಟೆಟ್ರಾ ಪ್ಯಾಕುಗಳು, 180 ಎಂ ಎಲ್ ನ 10 ಎಂಸಿ ವಿಸ್ಕಿಯ ಬಾಟೆಲ್ ಗಳು, 180 ಎಂಎಲ್ ನ 8 ಬಿ ಪಿ ವಿಸ್ಕಿಯ ಟೆಟ್ರಾ ಪ್ಯಾಕುಗಳು, 90 ಎಂ ಎಲ್ ನ 4 ಎಂ ಸಿ ಬ್ರಾಂಡಿಯ ಟೆಟ್ರಾ ಪ್ಯಾಕುಗಳು, 500 ಎಂ ಎಲ್ ನ ಪವರ್ ಕೂಲ್ ನ 4 ಟಿನ್ ಹಾಗೂ 650 ಎಂ ಎಲ್ ನ 4 ಪವರ್ ಕೂಲ್ ಬಿಯರ್ ಬಾಟೆಲ್ ಗಳು ಹೀಗೆ ಒಟ್ಟಾಗಿ 9.900 ಲೀಟ್ ಮದ್ಯ ಹಾಗೂ 4.600 ಲೀಟರ್ ಬಿಯರ್ ಕಂಡು ಬಂದಿರುತ್ತದೆ. ಸದರಿ ಮದ್ಯಗಳ ಜೊತೆ ಹಳದಿ ಬಣ್ಣದ 2 ಪ್ಲಾಸ್ಟಿಕ್ ಚೀಲವನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ.

ದೊರೆತ ಮದ್ಯ ಹಾಗೂ ಬಿಯರ್ ನಲ್ಲಿ ತಲಾ 2ಮದ್ಯದ ಟೆಟ್ರಾ ಪ್ಯಾಕು ಹಾಗೂ 2 ಬಿಯರ್ ಬಾಟೆಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕ ಮಾಡಿರುತ್ತೇವೆ. ಮಾದರಿ ಮೊಹರಿನ ನಕಲನ್ನು ಸ್ಥಳದಲ್ಲೆ ತಯಾರಿಸಿ ಪಂಚರ ಸಹಿಯನ್ನು ಪಡೆಯಲಾಯಿತು. ನಂತರ ಮಹಜರ್ ಕ್ರಮವನ್ನು ಸಂಜೆ 4.35 ರಿಂದ 6.00 ಗಂಟೆರವರೆಗೆ ಜರುಗಿಸಲಾಗಿರುತ್ತದೆ. ಆರೋಪಿಗೆ ಕಲಂ 41 ಸಿ ಆರ್ ಪಿಸಿ ಅಡಿಯಲ್ಲಿ ನೋಟೀಸನ್ನು ಜಾರಿ ಮಾಡಿ ತನಿಖೆಗೆ ಹಾಜರಾಗುವಂತೆ ತಿಳಿಸಿರುತ್ತದೆ. ನಂತರ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳಗೊಂದಿಗೆ ಠಾಣೆಗೆ ಹಾಜರಾಗಿ ಸ್ವದೂರನ್ನು ದಾಖಲಿಸಿಕೊಂಡಿರುತ್ತೇವೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈಗ ಸಾಕ್ಷಿಗೆ ಪಂಚರುಗಳಿಗೆ ನೀಡಿದ ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನೋಟೀಸನ್ನು ನಿಪಿ-7 ಮತ್ತು ನಿಪಿ-08 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಮತ್ತು ನಿಪಿ-08(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿವೇದನೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿವೇದನೆಯನ್ನು ನಿಪಿ-9 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರಧಿಯನ್ನು ನಿಪಿ-10 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ನಿಪಿ-1ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-02 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಸಿ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-4 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

ಸದರಿ ಜಪ್ತಿ ಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಸದರಿ ರಾಸಾಯನಿಕ ಪರೀಕ್ಷೆಗೆ ಜಪ್ತಿ ಪಡಿಸಿಕೊಂಡ 180ಎಂ ಎಲ್ ನ 2 ಓಲ್ಡ್ ಅಡ್ಮಿರಲ್ ಬ್ರಾಂಡಿಯ ಟೆಟ್ರಾ ಪ್ಯಾಕಗಳನ್ನು ತೋರಿಸಲಾಗಿ

ನೋಡಿ ಗುರುತಿಸಿದ್ದು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 180 ಎಂಎಲ್ ನ 2 ಓಲ್ಡ್ ಮಾಂಕ್ ರಮ್ ನ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 180 ಎಂ ಎಲ್ ನ 2 ಓಟಿ ವಿಸ್ಕಿ ಯ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 3 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 180 ಎಂ ಎಲ್ ನ 2 ಎಂಸಿ ರಮ್ ಟೆಟ್ರಾ ಪ್ಯಾಕುಗಳು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 4 ಎಂದು ಗುರುತಿಸಲಾಯಿತು.ಈಗ ಸಾಕ್ಷಿಗೆ 180 ಎಂ ಎಲ್ ನ 2 ಎಂಸಿ ವಿಸ್ಕಿಯ ಬಾಟಲ್ ಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 5 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 180 ಎಂಎಲ್ ನ 2 ಬಿ ಪಿ ವಿಸ್ಕಿಯ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 6 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 90 ಎಂ ಎಲ್ ನ 2 ಎಂಸಿ ಬ್ರಾಂಡಿಯ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 7 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 500 ಎಂ ಎಲ್ ನ ಪವರ್ ಕೂಲ್ ನ 2 ಟಿನ್ ಹಾಗೂ 650 ಎಂ ಎಲ್ ನ 2 ಪವರ್ ಕೂಲ್ ಬಿಯರ್ ಬಾಟಲ್ ಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 8 ಮತ್ತು 9 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 2 ಪ್ಲಾಸ್ಟಿಕ್ ಚೀಲಗಳನ್ನು ತೋರಿಸಲಾಗಿನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು 10 ಮತ್ತು 11 ಎಂದು ಗುರುತಿಸಲಾಯಿತು.

**ವಾಟೀ ಸವಾಲು ಃ ಆರೋಪಿ ಪರ ಶ್ರೀಮತಿ ಆರ್ ಟಿ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಿಮಗೆ ಯಾವುದೇ ಲಿಖಿತ ದೂರು ಬಂದಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಕಛೇರಿಗೆ

ಫೋನ್ ಮಾಡಿ ಮಾಹಿತಿ ನೀಡಿದ್ದರ ಅಥವಾ ನಿಮ್ಮ personal ನಂಬರ್ ಗೆ ಫೋನ್ ಮಾಡಿ ಮಾಹಿತಿ ನೀಡಿದ್ದರ ಎಂದರೆ ಸಾಕ್ಷಿ ನನ್ನ personal ನಂಬರ್ ಗೆ ಎಂದು ನುಡಿಯುತ್ತಾರೆ. ಮಾಹಿತಿಯನ್ನು ಡೈರಿಯಲ್ಲಿ ನಮೂದು ಮಾಡಿದ ಬಗ್ಗೆ ದಾಖಲೆ ಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲುಗಳು ಭರ್ತಿ ಇದ್ದವಾ ಅಥವಾ ಖಾಲಿ ಇದ್ದವ ಎಂಬುದರ ಬಗ್ಗೆ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಭರ್ತಿ ಇದ್ದವು ಎಂದು ನುಡಿಯುತ್ತಾರೆ. ಸರ್ಕಾರಿ ಜೀಪಿನಲ್ಲಿ ನೀವು ಎಷ್ಟು ಜನ ಹೋಗಿರುತ್ತೀರಿ ಎಂದರೆ ಸಾಕ್ಷಿ 4 ಜನ ಎಂದು ನುಡಿಯುತ್ತಾರೆ. ಇನ್ನೊಬ್ಬರು ಯಾರು ಎಂದರೆ ಸಾಕ್ಷಿ ಚಾಲಕ ಪಾಂಡುರಂಗ ಎಂದು ನುಡಿಯುತ್ತಾರೆ. ಬಸ್ ಸ್ಟಾಂಡ್ ನಿಂದ ಆರೋಪಿಯ ಮನೆಗೆ ಎಷ್ಟು ದೂರ ಎಂದರೆ ಸಾಕ್ಷಿ 15-20 ಮೀಟರ್ ಎಂದು ನುಡಿಯುತ್ತಾರೆ. ಪಂಚರನ್ನು ಜೀಪಿನಲ್ಲೆ ಕರೆದುಕೊಂಡು ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಜೀಪಿನಲ್ಲಿ ಹೋಗಿದ್ದು ಹಾಗೂ ಪಂಚರು ನಡೆದುಕೊಂಡು ಬಂದರು ಎಂದು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರ್ ಮಾಡಿದ ಮನೆಯ ಅಕ್ಕ ಪಕ್ಕ ವಾಸದ ಮನೆಗಳು ಇವೆಯೆ ಅಥವಾ ಖಾಲಿ ಜಾಗ ಇದೆಯೆ ಎಂದರೆ ಸಾಕ್ಷಿ ಖಾಲಿ ಜಾಗ ಇದ್ದು ವಾಸದ ಮನೆಗಳು ಸ್ವಲ್ಪ ದೂರ ಇವೆ ಎಂದು ನುಡಿಯುತ್ತಾರೆ. ಮನೆಯ ನಂಬರ್ ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಮನೆ ನಂಬರ್ ಹಾಗೂ ಎಲೆಕ್ಟ್ರಿಸಿಟಿ ನಂಬರ್ ಯಾವುದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮನೆಯ ಮಾಲೀಕರು ಯಾರು ಎಂದು ಹಾಗೂ ಮನೆಯಲ್ಲಿ ಎಷ್ಟು ಕೋಣೆಗಳು ಇವೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ತನಿಖೆಯ ಕಾಲದಲ್ಲಿ ಪತ್ರ ಹಾಕಿ ಮನೆ ಮಾಲೀಕರ ಬಗ್ಗೆ ಮಾಹಿತಿ ಪಡೆದಿರುತ್ತದೆ ಎಂದು ನುಡಿಯುತ್ತಾರೆ. ಮನೆಯಲ್ಲಿ ಸೋಫಾ ಮತ್ತು ಇತರೆ ವಸ್ತುಗಳು ಇರುವುದರ

ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಬೇರೆ ವ್ಯಕ್ತಿಗಳು ಇದ್ದರು ಆ ಬಗ್ಗೆಯೂ ಸಹ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಯಾರೂ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಮಾಡುವಾಗ ತಗಚಿಗುಪ್ಪೆ ಗ್ರಾಮದ ಮುಖ್ಯಸ್ಥರಿಗೆ ಮಾಹಿತಿ ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಗ್ರಾಮಸ್ಥರು ಬಂದಿದ್ದರು ಹಾಗೂ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿ ಯಾರೂ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ತಗಚಗುಪ್ಪೆ ಗ್ರಾಮದಲ್ಲಿ 100- 150 ಮನೆಗಳು ಇವೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಮದ್ಯವನ್ನು ಯಾರು ಮೊದಲು ನೋಡಿರುತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಜೊತೆಯಲ್ಲೆ ಇದ್ದೆವು ಎಲ್ಲರೂ ನೋಡಿರುತ್ತೇವೆ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 9 ಖಾಲಿ ಇದ್ದು ಎಲ್ಲಾ ಗುಜರಿಯಲ್ಲಿ ಸಿಗುತ್ತವೆ ಎಂದರೆ ಸಾಕ್ಷಿ ಎಫ್ ಎಸ್ ಎಲ್ ನಲ್ಲಿ ನೋಡಿ ವರಧಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಮದ್ಯದ ಟೆಟ್ರಾ ಪ್ಯಾಕುಗಳನ್ನು ಹಾಗೂ ಬಿಯರ್ ಬಾಟೆಲುಗಳನ್ನು ಮಹಜರ್ ಸಮಯದಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಪಂಚರಿಗೆ ನೋಟಿಸ್ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದು ಅವುಗಳನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಶೋಧನಾ ವಾರೆಂಟ್ ಅನ್ನು ಸಹ ನೀವು ಠಾಣೆಯಲ್ಲಿ ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮಹಜರನ್ನು ಠಾಣೆಯಲ್ಲೆ ಜರುಗಿಸಿ ಸಹಿ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 9 ನಿಮ್ಮ ಇಲಾಖೆಗೆ ಸಂಬಂಧಪಟ್ಟಿದು ಆರೋಪಿಗೆ ಯಾವುದೇ ಸಂಬಂಧಪಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಲಿಸ್ಟ್ ಆಫ್ ಆರ್ಟಿಕಲ್ಸ್ ನಲ್ಲಿ ಸದರಿ ಪ್ಲಾಸ್ಟಿಕ್ ಚೀಲಗಳನ್ನು ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ಮಹಜರ್ ನಲ್ಲಿ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಮದ್ಯದ ಉತ್ಪಾದನೆ ದಿನಾಂಕ, ಸೀರಿಯಲ್ ನಂಬರ್ ಮತುತ ಕೊನೆ ದಿನಾಂಕ ಹಾಗೂ ಕಂಪನಿಯ ಬಗ್ಗೆ

ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಠಾಣೆಯ ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**